# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

## ಭಾಗ ೭

### ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣ

ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣವನ್ನು ಮೆಚ್ಚಿ ಹಲವಾರು ಪತ್ರಿಕೆಗಳಲ್ಲಿ ವರದಿಗಳು ಪ್ರಕಟವಾದುವು. ಇದಲ್ಲದೆ ಪ್ರಸಿದ್ಧ ವ್ಯಕ್ತಿಗಳ ನೆನಪುಗಳು ಕೂಡ ಸ್ವಾಮೀಜಿಯವರ ಬಗ್ಗೆ ಬೆಳಕನ್ನು ಚೆಲ್ಲುತ್ತವೆ. ಈ ದೃಷ್ಟಿಯಲ್ಲಿ ಹ್ಯಾರಿಯಟ್ ಮುನ್ರೋ ಎಂಬ ಮಹಿಳೆಯ ಬರಹ ವಿಶಿಷ್ಟವಾಗಿದೆ. ಒಬ್ಬ ಪ್ರಸಿದ್ಧ ಕವಯಿತ್ರಿಯಾದ ಆಕೆ ತನ್ನ ಆತ್ಮಚರಿತ್ರೆಯಲ್ಲಿ ಹೀಗೆ ಬರೆಯುತ್ತಾಳೆ:

''ಸರ್ವಧರ್ಮ ಸಮ್ಮೇಳನವು ಒಂದು generation ನಲ್ಲಿಯೇ ವಿಜಯವನ್ನು ಘೋಷಿಸುವ ಒಂದು ಮಹತ್ವದ ಸಂದರ್ಭವಾಗಿದೆ. ರೆವೆರೆಂಡ್ ಜಾನ್ ಎಚ್. ಬರೋಸ್ ಇದಕ್ಕಾಗಿ ಎರಡು ವರ್ಷಗಳಿಂದ ಸತತವಾಗಿ ದುಡಿಯುತ್ತಿದ್ದರು. ಇದು ಜಗತ್ತಿನ ಮೊಟ್ಟಮೊದಲ ಸರ್ವಧರ್ಮ ಸಮ್ಮೇಳನವಾಗಿದೆ. ಇದರ ಮಹತ್ತಿನಿಂದ ಮುಗ್ಧರಾದ ಸಭಿಕರೇ ಇದಕ್ಕೆ ಮೌನ ಸಾಕ್ಷಿ. ಈ ಸಮ್ಮೇಳನವು ಭವಿಷ್ಯದಲ್ಲಿ ಉದಾರತನ ಮತ್ತು ಶಾಂತಿಯ ಯುಗಕ್ಕೆ ನಾಂದಿಯನ್ನು ಹಾಡಬಹುದು ಎಂಬ ಭರವಸೆಯನ್ನು ಮೂಡಿಸುತ್ತದೆ. ಬರೋಸ್ ಅವರ ಎಡಗಡೆಯಲ್ಲಿ ಕ್ರೈಸ್ತ ಧರ್ಮದ ಹಲವಾರು ಪಂಗಡಗಳ ಪ್ರತಿನಿಧಿಗಳಾಗಿದ್ದ, ಕಪ್ಪು ಕೋಟು ಧಾರಿಗಳಾಗಿದ್ದ ಬಿಷಪ್ ಮತ್ತು ಪಾದ್ರಿಗಳು ವಿರಾಜಮಾನರಾಗಿದ್ದರು. ಅವರ ಬಲಗಡೆ, ಚಿತ್ರವಿಚಿತ್ರವಾದ ವಸ್ತ್ರಧಾರಿಗಳಾಗಿದ್ದ, ದೂರದೇಶಗಳಿಂದ ಆಗಮಿಸಿದ್ದ ಗಣ್ಯವ್ಯಕ್ತಿಗಳು ಆಸೀನರಾಗಿದ್ದರು. ಅವರಲ್ಲಿ ಚೀನಾದೇಶದಿಂದ ಕನ್‌ಫ್ಯೂಷಿಯನ್ ಗುರುಗಳು, ಭಾರತದಿಂದ ಬಂದ ಜೈನರು, ಅಲಹಾಬಾದಿನ ಥಿಯೋಸಫಿಸ್ಟ್, ಜಪಾನಿನ ಷಿಂಟೋ ಪುರೋಹಿತರು ಮತ್ತು ನಾಲ್ಕು ಬೌದ್ಧ ಭಿಕ್ಷುಗಳು ಹಾಗೂ ಮುಂಬೈ ನಗರದಿಂದ ಬಂದಿದ್ದ ಕಾಷಾಯವಸ್ತ್ರಧಾರಿಯಾದ ಒಬ್ಬ ಹಿಂದೂ ಸಂನ್ಯಾಸಿಯೂ ಸೇರಿದ್ದರು.

''ಇವರಲ್ಲಿ ಕಡೆಯವರಾದ ಸ್ವಾಮಿ ವಿವೇಕಾನಂದರು ಒಬ್ಬ ಅದ್ಭುತ ವ್ಯಕ್ತಿ. ಅವರು ಇಡೀ ಸಮ್ಮೇಳನವನ್ನು ಸೂರೆಗೊಂಡರು ಎಂದೇ ಹೇಳಬೇಕು. ವಿದೇಶೀ ಪಂಗಡಗಳಿಗೆ ಸೇರಿದ ಅನೇಕರು ಚೆನ್ನಾಗಿಯೇ ಭಾಷಣ ಮಾಡಿದರು – ಗ್ರೀಕರು, ರಷಿಯನ್ನರು, ಅರ್ಮೇನಿಯನ್ನರು, ಕೊಲ್ಕತಾದ ಮಜುಮ್ದಾರ್, ಸಿಲೋನಿನ ಧರ್ಮಪಾಲ ಇವರೆಲ್ಲ. ಆದರೆ ಇವರಲ್ಲೆಲ್ಲ ಕಿತ್ತಳೆ ಬಣ್ಣದ ವಸ್ತ್ರವನ್ನು ಧರಿಸಿರುವ ಸ್ಫುರದ್ರೂಪಿಯಾದ ಈ ಸಂನ್ಯಾಸಿಯು ಮಾತ್ರವೇ ಪರಿಶುದ್ಧವಾದ ಇಂಗ್ಲಿಷ್ ಭಾಷೆಯಲ್ಲಿ ಉದಾತ್ತ ಸಂದೇಶವನ್ನು ನೀಡಿದನು. ಆತನ ವ್ಯಕ್ತಿತ್ವವು ಪ್ರಭಾವಶಾಲಿಯಾಗಿತ್ತು, ಸೂಜಿಗಲ್ಲಿನಂತೆ ಸೆಳೆಯುತ್ತಿತ್ತು. ಆತನ ಧ್ವನಿಯು ಕಂಚಿನಂತೆ ಮೊಳಗುತ್ತಿತ್ತು. ಅವನು ತೋರ್ಪಡಿಸಿದ ಭಾವನೆಗಳಲ್ಲಿ ನಿಯಂತ್ರಣವಿತ್ತು. ಪಾಶ್ಚಿಮಾತ್ಯ ಜಗತ್ತಿಗೆ ಆತನು ನೀಡುತ್ತಿದ್ದ ಸಂದೇಶವು ಅತ್ಯಂತ ಸುಂದರವಾಗಿತ್ತು. ಇವೆಲ್ಲ ಒಟ್ಟುಸೇರಿ, ಸಭಿಕರಲ್ಲಿ ಒಂದು ವಿರಳವಾದ ಮತ್ತು ಪರಿಪೂರ್ಣವಾದ ವಾತಾವರಣ ನಿರ್ಮಾಣವಾಗಿತ್ತು. ವಿವೇಕಾನಂದರು ಮಾನವನ ವಾಕ್‌ಚಾತುರ್ಯದ ಉನ್ನತ ಶಿಖರ.''

ಇಲ್ಲಿ ಇನ್ನೊಂದು ವೈಶಿಷ್ಟ್ಯವನ್ನು ಗಮನಿಸಬೇಕು. ಹ್ಯಾರಿಯಟ್ ಮುನ್ರೋ ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣವನ್ನು ಕೇಳಿದ ಮೇಲೆ, ಸ್ವಾಮೀಜಿಯವರ ಇನ್ನಾವುದೇ ಭಾಷಣವನ್ನು ಕೇಳಲೇ ಇಲ್ಲ. ಏಕೆಂದರೆ, ಆಕೆಯ ಪ್ರಕಾರ ಆಕೆ ವಾಗ್ಮಿತ್ವದ ಪರಿಪೂರ್ಣತೆಯನ್ನು ಈಗಾಗಲೇ ಅನುಭವಿಸಿದ್ದಳು. ಅದಕ್ಕಾಗಿಯೇ ಬೇರಾವುದೇ ಭಾಷಣವನ್ನು ಕೇಳಲು ಆಕೆ ಇಷ್ಟಪಡಲಿಲ್ಲ.

ಸೆಪ್ಟೆಂಬರ್ ೧೨, ೧೮೯೩ ರಂದು ಚಿಕಾಗೋ ಟೈಮ್ಸ್ ಸ್ವಾಮಿ ವಿವೇಕಾನಂದರ ಸ್ಫುರದ್ರೂಪವೇ ಅವರ ಪ್ರಖ್ಯಾತಿಗೆ ಕಾರಣ ಎಂದು ವರದಿ ಮಾಡಿತು. ಹಾಗೆಯೇ ಚಿಕಾಗೋ ಅಡ್ವೊಕೇಟ್ ಎನ್ನುವ ಇನ್ನೊಂದು ಪತ್ರಿಕೆಯು ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದಲ್ಲಿ ಅತ್ಯಂತ ಆಕರ್ಷಕ ವ್ಯಕ್ತಿ ಎಂದು ಬಣ್ಣಿಸಿತು. ಬೋಸ್ಟನ್ ಈವ್‌ನಿಂಗ್ ಪತ್ರಿಕೆಯ ವರದಿಗಾರನು ಸಮ್ಮೇಳನದ ಪ್ರತಿನಿಧಿಗಳನ್ನು ವೇದಿಕೆಯ ನೇಪಥ್ಯದಲ್ಲಿ ಭೇಟಿ ಮಾಡಿದನು. ಅವನು ಸ್ವಾಮೀಜಿಯವರ ಬಗ್ಗೆ ಆತ್ಮೀಯವಾಗಿ ಬರೆದಿದ್ದಾನೆ. ಅವನ ಲೇಖನವು ಈ ಪತ್ರಿಕೆಯ ಸೆಪ್ಟೆಂಬರ್ ೩೦, ೧೮೯೩ರಂದು ಪ್ರಕಟವಾಯಿತು. ಅದರ ಸಾರಾಂಶ ಹೀಗಿದೆ:

''ಆರ್ಟ್ ಪ್ಯಾಲೆಸ್‌ನ ಎಡಭಾಗದಲ್ಲಿ ಒಂದು ಕೊಠಡಿ ಇತ್ತು. ಅದರ ಮುಂಭಾಗದಲ್ಲಿ 'ಸಂಖ್ಯೆ ೧ – ಪ್ರವೇಶವಿಲ್ಲ' ಎಂದು ಬರೆಯಲಾಗಿತ್ತು. ಅಲ್ಲಿ ಪ್ರತಿನಿಧಿಗಳು ಸಮ್ಮೇಳನದ ಕಾರ್ಯಕಲಾಪಗಳ ನಡುವೆ ಪರಸ್ಪರ ವಾರ್ತಾಲಾಪವನ್ನು ನಡೆಸುವುದಕ್ಕೆ, ಹಾಗೂ ಸಮ್ಮೇಳನದ ಅಧ್ಯಕ್ಷರಾದ ಬಾನಿ ಅವರನ್ನು ಭೇಟಿಮಾಡುವುದಕ್ಕೆ ಉಪಯೋಗಿಸುತ್ತಿದ್ದರು. ಬಾನಿ ಅವರ ಕಛೇರಿಯು ಈ ಕೊಠಡಿಯ ಪಕ್ಕದಲ್ಲಿಯೇ ಇತ್ತು. ಈ ಕೊಠಡಿಗೆ ಸಾರ್ವಜನಿಕರಿಗೆ ಪ್ರವೇಶವಿರಲಿಲ್ಲ. ಆದರೂ ಈ 'ಪವಿತ್ರ ಅಂಗಣ'ಕ್ಕೆ ಪ್ರವೇಶವನ್ನು ಪಡೆಯುವುದು ಅಸಾಧ್ಯ

ವೇನೂ ಆಗಿರಲಿಲ್ಲ. ಹೀಗಾಗಿ ಗಣ್ಯರಾದ ಅತಿಥಿಗಳ ಒಡನೆ ನಿಕಟ ಸಂಪರ್ಕವನ್ನು ಇರಿಸಿಕೊಳ್ಳಲು ನನಗೆ ಸಾಧ್ಯವಾಯಿತು.

''ಈ ಪಕ್ಕದ ಕೊಠಡಿಯಲ್ಲಿ ಕಂಡುಬಂದವರಲ್ಲಿ ಪರಮಾದ್ಭುತ ವ್ಯಕ್ತಿಯೆಂದರೆ ಹಿಂದೂ ಸಂನ್ಯಾಸಿಯಾದ ಸ್ವಾಮಿ ವಿವೇಕಾನಂದರು. ಅವರದು ದೊಡ್ಡ ಮೈಕಟ್ಟು; ಕಟ್ಟುಮಸ್ತಾದ ದೇಹ. ಅವರದು ನುಣ್ಣಗೆ ಕ್ಷೌರ ಮಾಡಿದ ಗಲ್ಲ; ಬೆಳ್ಳಗೆ ಬೆಳಗುತ್ತಿದ್ದ ದಂತಪಕ್ತಿ, ಚೆನ್ನಾಗಿ ಮೂಡಿಬಂದ ತುಟಿಗಳು. ಅವರು ಸಂಭಾಷಣೆ ನಡೆಸುತ್ತಿರುವಾಗ ಕನಿಕರಯುಕ್ತ ಮಂದಹಾಸವೊಂದು ಅವರ ಮುಖದಲ್ಲಿ ಮನೆಮಾಡುತ್ತಿತ್ತು. ಅವರು ನಿಂಬೆಹಣ್ಣಿನ ಅಥವಾ ಕೆಂಪು ಬಣ್ಣದ ಪೇಟವನ್ನು ಧರಿಸಿಕೊಂಡಿದ್ದರು. ಹಾಗೆಯೇ ಅವರ ನಿಲುವಂಗಿಯೂ ಅದೇ ಬಣ್ಣದ್ದಾಗಿತ್ತು. ತಮ್ಮ ನಡುವಿನಲ್ಲಿ ಅವರು ಬಟ್ಟೆಯನ್ನು ಕಟ್ಟಿಕೊಂಡಿದ್ದರು. ಅದು ಹೊಳೆಯುವ ಕಿತ್ತಳೆಬಣ್ಣದ್ದಾಗಿತ್ತು. ಅವರದು ಉತ್ಕೃಷ್ಟವಾದ ಇಂಗ್ಲಿಷ್ ಭಾಷೆ. ತಮಗೆ ಕೇಳುವ ಯಾವುದೇ ಪ್ರಶ್ನೆಗೆ ಅವರು ಬಹಳ ಪ್ರಾಮಾಣಿಕತೆಯಿಂದ ಉತ್ತರ ಕೊಡುತ್ತಿದ್ದರು.

''ಅವರ ನಡವಳಿಕೆಯು ಸರಳವಾಗಿತ್ತು. ಇದರೊಂದಿಗೆ ಮಹಿಳೆಯರೊಂದಿಗೆ ಮಾತನಾಡುವಾಗ, ಗಂಭೀರಭಾವವನ್ನು ತೋರುತ್ತಿದ್ದರು. ಅದು ಅವರ ಸಂನ್ಯಾಸ ಧರ್ಮದ ಪ್ರತೀಕವಾಗಿತ್ತು. ಅವರ ಧಾರ್ಮಿಕ ನಿಯಮಗಳ ಬಗ್ಗೆ ಪ್ರಶ್ನಿಸಿದಾಗ ವಿವೇಕಾನಂದರು ಹೇಳುತ್ತಿದ್ದರು: ''ನಾನು ಬಯಸಿದಾಗಲೆಲ್ಲ ಸ್ವತಂತ್ರವಾಗಿರಬಲ್ಲೆ. ಕೆಲವೊಮ್ಮೆ ನಾನು ಹಿಮಾಲಯದಲ್ಲಿ ನೆಲೆಸುತ್ತೇನೆ. ಇನ್ನು ಕೆಲವೊಮ್ಮೆ ನಗರ ಪ್ರದೇಶದ ಬೀದಿಗಳಲ್ಲಿಯೂ ತಂಗುತ್ತೇನೆ. ನನ್ನ ಮುಂದಿನ ಊಟ ಎಲ್ಲಿಂದ ಬರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಹಣವನ್ನು ಎಂದೂ ಇಟ್ಟುಕೊಳ್ಳುವುದಿಲ್ಲ. ಜನರ ದೇಣಿಗೆಯಿಂದ ನಾನು ಇಲ್ಲಿಗೆ ಬಂದಿದ್ದೇನೆ.'' ಅನಂತರ ಪಕ್ಕದಲ್ಲಿಯೇ ನಿಂತಿದ್ದ ತನ್ನ ಒಂದಿಬ್ಬರು ದೇಶಬಾಂಧವರನ್ನು ತೋರಿಸುತ್ತ ಅವರು ಹೇಳಿದರು: ''ಇವರು ನನ್ನನ್ನು ನೋಡಿಕೊಳ್ಳುತ್ತಾರೆ.'' ತಮ್ಮ ಚಿಕಾಗೋ ವಾಸ್ತವ್ಯದ ಖರ್ಚನ್ನು ಇತರರು ಭರಿಸಿಕೊಳ್ಳುತ್ತಿದ್ದಾರೆ ಎನ್ನುವುದು ಅವರ ಮಾತುಗಳಿಂದ ತಿಳಿದುಬರುತ್ತಿತ್ತು. ಅವರ ಸಂನ್ಯಾಸಿ ಉಡುಪಿನ ಬಗ್ಗೆ ಕೇಳಿದಾಗ ಅವರು ಹೇಳಿದರು: ''ನಾನೀಗ ಧರಿಸಿರುವುದು ಒಳ್ಳೆಯ ಪೋಷಾಕು. ನನ್ನ ದೇಶದಲ್ಲಿ ನಾನು ಧರಿಸುವುದು ಸರಳವಾದ ವಸ್ತ್ರವನ್ನು. ಅಲ್ಲಿ ಬರಿಗಾಲಿನಲ್ಲಿ ನಡೆದಾಡುತ್ತೇನೆ. ನಾನು ಹೇಗೆ ತಾನೇ ಜಾತಿನಿಯಮಗಳನ್ನು ಅನುಸರಿಸುವುದು ಸಾಧ್ಯ? ಜಾತಿಯೆಂಬುದು ಸಾಮಾಜಿಕ ವ್ಯವಸ್ಥೆ. ಇದಕ್ಕೂ ಧರ್ಮಕ್ಕೂ ಯಾವ ಸಂಬಂಧವೂ ಇಲ್ಲ. ಎಲ್ಲ ಜಾತಿಯವರ ಜೊತೆಗೂ ನಾನು ಸಂಪರ್ಕ ಇಟ್ಟುಕೊಂಡಿದ್ದೇನೆ.''

ಸ್ವಾಮಿ ವಿವೇಕಾನಂದರನ್ನು ನೋಡಿದರೆ, ಅವರು ಬಹಳ ಉತ್ತಮ ಕುಲದಿಂದ ಬಂದವರೆಂದು ತೋರುತ್ತದೆ. ವರ್ಷಗಳ ಕಾಲದ ಬಡತನದ ಜೀವನದ ವ್ರತಾಚರಣೆ ಮತ್ತು ಅಲೆದಾಟಗಳ ನಡುವೆಯೂ ಅವರು ಸಭ್ಯವ್ಯಕ್ತಿಯಾಗಿಯೇ ಕಂಡುಬರುತ್ತಾರೆ. ಅವರ ಕುಟುಂಬದ ಹೆಸರು ನಮಗೆ ತಿಳಿಯದು. ಅವರು ವಿವೇಕಾನಂದ ಎಂಬ ಹೆಸರನ್ನು ಸಂನ್ಯಾಸಿಯಾದ ಮೇಲೆ ಪಡೆದುಕೊಂಡರು. 'ಸ್ವಾಮಿ' ಎನ್ನುವುದು ಅವರ ಹೆಸರಿನ ಹಿಂದೆ ಇರುವ, ಸಂನ್ಯಾಸ ಧರ್ಮವನ್ನು ಸೂಚಿಸುವ ಹೆಸರು. ಅವರ ವಯಸ್ಸು ಮೂವತ್ತರ ಆಸುಪಾಸು ಇರಬಹುದು. ಅವರನ್ನು ನೋಡಿದರೆ ಇವರದು ತ್ಯಾಗಜೀವನಕ್ಕೆ ಸಮರ್ಪಿತವಾದ ಜೀವನ ಎಂದು ತೋರುತ್ತಿತ್ತು. ಅವರ ಜೀವನದಲ್ಲಿ ಉಂಟಾದ ಈ ಪರಿವರ್ತನೆಗೆ ಕಾರಣವೇನು ಎಂದು ಆಶ್ಚರ್ಯವಾಗದೆ ಇರದು.

''ನಾನು ಎಲ್ಲ ಸ್ತ್ರೀಯರಲ್ಲಿಯೂ ಜಗನ್ಮಾತೆಯನ್ನೇ ಕಾಣುತ್ತೇನೆ. ಹೀಗಾಗಿ ನಾನು ಏತಕ್ಕೆ ತಾನೇ ವಿವಾಹವಾಗಬೇಕು? ನಾನು ಈ ಎಲ್ಲ ತ್ಯಾಗವನ್ನು ಮಾಡುತ್ತಿರುವುದು ಏಕೆ ಗೊತ್ತೇನು? ಈ ಪ್ರಾಪಂಚಿಕ ಬಂಧನಗಳಿಂದ ಬಿಡುಗಡೆ ಪಡೆದುಕೊಳ್ಳುವುದಕ್ಕೆ ಮತ್ತು ಎಲ್ಲ ಬಗೆಯ ಆಸಕ್ತಿಗಳಿಂದ ಮುಕ್ತನಾಗುವುದಕ್ಕೆ. ಆ ಮೂಲಕ ಪುನರ್ಜನ್ಮದಿಂದ ನಾನು ಮುಕ್ತನಾಗುತ್ತೇನೆ. ನಾನು ಮರಣಹೊಂದಿದಾಗ ಭಗವಂತನಲ್ಲಿ ತನ್ಮಯನಾಗುತ್ತೇನೆ, ಐಕ್ಯವಾಗಿಬಿಡುತ್ತೇನೆ. ನಾನು ಬುದ್ಧನಾಗುತ್ತೇನೆ.''

''ಹಾಗೆಂದು ಸ್ವಾಮಿ ವಿವೇಕಾನಂದರು ತಮ್ಮನ್ನು ಬೌದ್ಧ ಧರ್ಮದ ಅನುಯಾಯಿಯೆಂದೇನೂ ಹೇಳಿಕೊಳ್ಳಲಿಲ್ಲ. ಅವರು ತಮ್ಮನ್ನು ಯಾವುದೇ ಪಂಗಡಕ್ಕೆ ಸೇರಿದವರು ಎಂದು ಹೇಳಿಕೊಳ್ಳುವುದಿಲ್ಲ. ತಾವು ಜಾತಿಮತಗಳಿಗೆ ಮೀರಿದವರು ಎಂದು ಅವರು ಸಾರುತ್ತಾರೆ. ಅವರು ತಮ್ಮನ್ನು ಸಂನ್ಯಾಸಿ ಅಥವಾ ಪವಿತ್ರಪುರುಷ ಎಂದು ಕರೆದುಕೊಳ್ಳುತ್ತಾರೆ.

''ಅವರು ಕೆಲವು ಕರಪತ್ರಗಳನ್ನು ಇಟ್ಟುಕೊಂಡಿದ್ದರು. ಅದರಲ್ಲಿ ಅವರ ಗುರುಗಳಾದ ರಾಮಕೃಷ್ಣ ಪರಮಹಂಸರ ಬಗ್ಗೆ ವಿಚಾರವಿತ್ತು. ಶ್ರೀರಾಮಕೃಷ್ಣರು ತಮ್ಮ ಶಿಷ್ಯರ ಮೇಲೆ ಮತ್ತು ಕೇಳುಗರ ಮೇಲೆ ಪ್ರಭಾವವನ್ನು ಬೀರಿದ ಮಹಾಪುರುಷರು. ವಿವೇಕಾನಂದರ ಭಾಷಣದ ವಿಷಯವು ಆಕಾಶದಂತೆ ವಿಶಾಲವಾಗಿತ್ತು. ಧರ್ಮದ ಬಹು ಉತ್ತಮ ಮೌಲ್ಯಗಳನ್ನು ಒಳಗೊಂಡಿತ್ತು. ಅತ್ಯುತ್ಕೃಷ್ಟ ವಿಶ್ವಾತ್ಮಕ ಧರ್ಮವನ್ನು ಪ್ರತಿನಿಧಿಸುತ್ತಿತ್ತು. ಸ್ವಾಮಿ ವಿವೇಕಾನಂದರು ಮಾನವೀಯ ಧರ್ಮ ಮತ್ತು ಭಗವದ್ಭಕ್ತಿಗಾಗಿ ಮಾತ್ರವೇ ಒಳ್ಳೆಯ ಕೆಲಸಗಳನ್ನು ಮಾಡುವುದನ್ನು ಪ್ರತಿಪಾದಿಸುತ್ತಾರೆ, ಶಿಕ್ಷೆಯ ಭಯಕ್ಕಾಗಿಯೋ ಅಥವಾ ಬಹುಮಾನಕ್ಕಾಗಿಯೋ ಅಲ್ಲ.

''ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದಲ್ಲಿ ಎಲ್ಲರಿಗೂ ಪ್ರೀತಿಪಾತ್ರರು. ಇದಕ್ಕೆ ಕಾರಣ ಅವರ ಉದಾತ್ತ ಭಾವನೆಗಳು ಮತ್ತು ಆಕರ್ಷಕ ವ್ಯಕ್ತಿತ್ವ. ಅವರು ವೇದಿಕೆಯ ಮೇಲೆ ಅಡ್ಡಾಡಿದರೆ ಸಾಕು, ಸಾವಿರಾರು ಜನರು ಚಪ್ಪಾಳೆಯ ಮೂಲಕ ತಮ್ಮ ಮೆಚ್ಚುಗೆಯನ್ನು ತೋರ್ಪಡಿಸುತ್ತಿದ್ದರು. ಇದನ್ನು ವಿವೇಕಾನಂದರು ಮಗುವಿನಂಥ ಸಂತೋಷದಿಂದ

ಸ್ವೀಕರಿಸುತ್ತಿದ್ದರು. ಇದರಲ್ಲಿ ಯಾವ ಕಪಟತನವೂ ಇರುತ್ತಿರಲಿಲ್ಲ. ಈ ಮಟ್ಟದ ಗೌರವವು ವಿನೀತಭಾವದ ಈ ಹಿಂದೂ ಸಂನ್ಯಾಸಿಗೆ ಒಂದು ಆಶ್ಚರ್ಯಕರವಾದ ಅನುಭವವೇ ಸರಿ. ಏಕೆಂದರೆ, ಬಡತನ ಮತ್ತು ವೈರಾಗ್ಯದ ಹಿನ್ನೆಲೆಯ ಇವರು ವೈಭವ ಮತ್ತು ಪ್ರತಿಷ್ಠೆಗಳಿಗೆ ಒಗ್ಗಿಕೊಳ್ಳುವುದು ಸುಲಭವಲ್ಲ.''


ಒಬ್ಬರು ಅವರನ್ನು ಕೇಳಿದರು: ''ಥಿಯೊಸೊಫಿಸ್ಟರು ಸಾರುವಂತೆ ಹಿಮಾಲಯದಲ್ಲಿ ಮಹಾತ್ಮರು ಇದ್ದಾರೆಯೆ?'' ಎಂದು. ಅದಕ್ಕೆ ಸ್ವಾಮಿ ವಿವೇಕಾನಂದರು ಉತ್ತರಿಸಿದರು: ''ಅಂಥವರನ್ನೇನೂ ನಾನು ಕಾಣಲಿಲ್ಲ.''

### ನರಸಿಂಹಾಚಾರ್ಯ

ಅಮೆರಿಕೆಯಿಂದ ಸ್ವಾಮಿ ವಿವೇಕಾನಂದರು ಚೆನ್ನೈ ನಗರದ ತಮ್ಮ ಅನುಯಾಯಿಯಾದ ಅಳಸಿಂಗ ಪೆರುಮಾಳ್ ಅವರಿಗೆ ನವೆಂಬರ್ ೨, ೧೮೯೩ರಂದು ಒಂದು ಪತ್ರವನ್ನು ಬರೆಯುತ್ತಾರೆ. ಅದರಲ್ಲಿ, ಸರ್ವಧರ್ಮ ಸಮ್ಮೇಳನಕ್ಕೆ ವಿಶಿಷ್ಟಾದ್ವೈತದ ಪ್ರತಿನಿಧಿಯಾಗಿ ಭಾರತದಿಂದ ಬಂದಿರುವ ನರಸಿಂಹಾಚಾರ್ಯ ಎಂಬ ವಿಶಿಷ್ಟ ವ್ಯಕ್ತಿಯ ಬಗ್ಗೆ ವಿಚಾರಿಸುತ್ತಾರೆ. ಮದ್ರಾಸಿನ ಹುಡುಗನೊಬ್ಬನು ಎಲ್ಲಿಂದಲೋ ನಮ್ಮ ಮಧ್ಯೆ ಉದ್ಭವವಾಗಿದ್ದಾನೆ ಎಂದು ಬರೆಯುತ್ತಾರೆ. ''ಇವನು ಮೂರು ವರ್ಷಗಳಿಂದ ಈ ನಗರದಲ್ಲಿಯೆ ಅಲೆಯುತ್ತಿದ್ದಾನೆ...ಅಲೆಯುತ್ತಿರಲಿ, ಇಲ್ಲದಿರಲಿ, ನಾನು ಅವನನ್ನು ಇಷ್ಟಪಡುತ್ತೇನೆ. ದಯವಿಟ್ಟು ಇವನ ಬಗ್ಗೆ ನಿನಗೆ ಏನು ಗೊತ್ತೋ, ಎಲ್ಲವನ್ನೂ ಬರೆದು ತಿಳಿಸು. ಆತನಿಗೆ ನಿನ್ನ ಪರಿಚಯವಿದೆ. ಅವನು ಪ್ಯಾರಿಸ್ ವಸ್ತು ಪ್ರದರ್ಶನದ ಸಮಯದಲ್ಲಿಯೇ (೧೮೮೯) ಯೂರೋಪಿಗೆ ಬಂದಿಳಿದನು.''

ಸ್ವಾಮಿ ವಿವೇಕಾನಂದರು ಯಾರನ್ನು 'ಆ ಹುಡುಗ, ನರಸಿಂಹಾಚಾರ್ಯ' ಎಂದು ಕರೆದಿದ್ದಾರೆಯೋ, ಆತನು ಬೇರೆ ಯಾರೂ ಅಲ್ಲ. ಸ್ವಾಮೀಜಿಯವರ ಒಂದು ಛಾಯಾಚಿತ್ರದಲ್ಲಿ ಸ್ವಾಮೀಜಿ ಕುಳಿತುಕೊಂಡು ಏನನ್ನೋ ಬರೆಯುತ್ತಿದ್ದಾರೆ. ಅವರ ಹೆಗಲಿನ ಹಿಂದೆಯೇ ಯುವಕನೊಬ್ಬ ಅವರು ಬರೆಯುತ್ತಿರುವುದನ್ನೇ ದಿಟ್ಟಿಸಿ ನೋಡುತ್ತಿದ್ದಾನೆ. ಅವನೇ ಈ ನರಸಿಂಹಾಚಾರ್ಯ. ಅವನ ಬಗ್ಗೆ ಬೋಸ್ಟನ್ ಈವ್‌ನಿಂಗ್ ಪತ್ರಿಕೆಯು ಹೀಗೆ ಬರೆದಿತ್ತು: ''ಅವನು ಸರ್ವಧರ್ಮ ಸಮ್ಮೇಳನದ ಆ ಪಕ್ಕದ ಕೊಠಡಿಯ ಮಧ್ಯದಲ್ಲಿನ ಮೇಜಿನ ಮೇಲೆ ಒರಗಿಕೊಂಡು ನಿಂತಿದ್ದನು. ಅವನ ಉಜ್ವಲವಾದ ಮಗುವಿನಂಥ ಮುಖದಿಂದ ಭಾರತೀಯ ಸಂಸ್ಕೃತಿ ಮತ್ತು ನಮ್ಮ (ಪಾಶ್ಚಾತ್ಯ ಸಂಸ್ಕೃತಿ) ಸಂಸ್ಕೃತಿಯ ಬಗ್ಗೆ ಪುಂಖಾನುಪುಂಖವಾದ ಹಲವು ವಿಚಾರಗಳು ಹೊರಹೊಮ್ಮುತ್ತಿದ್ದವು.''

ನರಸಿಂಹಾಚಾರ್ಯನು ಅಲೆಮಾರಿಯೇ ಸರಿ. ಆದರೆ ಆಕರ್ಷಕ ವ್ಯಕ್ತಿತ್ವವುಳ್ಳವನಾಗಿದ್ದನು. ಸ್ವಾಮೀಜಿಯವರ ಪತ್ರಕ್ಕೆ ಉತ್ತರವಾಗಿ ಅಳಸಿಂಗರು ಇವನ ವೃತ್ತಾಂತವನ್ನೆಲ್ಲ ತಿಳಿಸಿದರು.



ನರಸಿಂಹಾಚಾರ್ಯನಂಥ ಬುದ್ಧಿವಂತ ಹುಡುಗನನ್ನು ಪಡೆದುಕೊಂಡೂ, ಕಣ್ಣೀರು ಸುರಿಸುತ್ತಿರುವ ಆತನ ತಾಯಿಯ ಕಥೆಯನ್ನು ಬಿನ್ನವಿಸಿದ್ದರು. ಈ ಕಾಗದ ಸ್ವಾಮೀಜಿಯವರನ್ನು ಇಡೀ ಅಮೇರಿಕದಾದ್ಯಂತ ಹಿಂಬಾಲಿಸಿತು! ಅದು ಅವರಿಗೆ ತಲುಪಿದ್ದು ನರಸಿಂಹಾಚಾರ್ಯ ಅವರ ಕಣ್ಣಿನಿಂದ ಮರೆಯಾದ ಮೇಲಷ್ಟೇ!

ತದನಂತರ, ನರಸಿಂಹಾಚಾರ್ಯನು ಅಮೆರಿಕದ ಉದ್ದಗಲಕ್ಕೂ ಓಡಾಡಿಕೊಂಡಿದ್ದನು. ಟೆನ್ನಸ್ಸೀ ಪ್ರಾಂತ್ಯದ ನ್ಯಾಶ್‌ವಿಲ್ ಎಂಬಲ್ಲಿ ಹಣವಿಲ್ಲದೆ ತೊಂದರೆಗೆ ಸಿಕ್ಕಿಹಾಕಿಕೊಂಡನು. ಐವತ್ತು ಡಾಲರುಗಳನ್ನು ಕಳಿಸಿಕೊಡುವಂತೆ ಸ್ವಾಮೀಜಿಗೆ ಪತ್ರ ಬರೆದನು. ಸ್ವಾಮೀಜಿ ಆಗ ಡೆಟ್ರಾಯಿಟ್‌ನಲ್ಲಿ ಇದ್ದರು. ಈ ಪತ್ರವನ್ನು ಚಿಕಾಗೋದಲ್ಲಿದ್ದ ಶ್ರೀಮತಿ ಹೇಲ್‌ಗೆ ವರ್ಗಾಯಿಸಿ, ''ಏನೆಂದು ಸಲಹೆ ನೀಡುತ್ತೀಯೆ, ತಾಯಿ?'' ಎಂದು ಬರೆದಿದ್ದರು. ಆಕೆಯ ಸಲಹೆಯಂತೆ ಸ್ವಾಮೀಜಿ ಹಣವನ್ನು ಕಳಿಸಿಕೊಟ್ಟರು. ಇಷ್ಟು ಮಾತ್ರವೇ ಅಲ್ಲ, ಮೂರು ತಿಂಗಳ ನಂತರ ನರಸಿಂಹಾಚಾರ್ಯನಿಗೆ ಸಹಾಯ ಮಾಡುವಂತೆ ಅಳಸಿಂಗ ಪೆರುಮಾಳ್‌ಗೆ ಕೂಡ ಪತ್ರವನ್ನು ಬರೆದರು. ''ಅವನೀಗ ಬಹಳ ಸಂಕಷ್ಟದಲ್ಲಿದ್ದಾನೆ. ಆದರೆ, ಅವನು ಹಸಿವಿನಿಂದ ಪರಿತಾಪ ಪಡದ ಹಾಗೆ ನಾನು ನೋಡಿಕೊಳ್ಳುತ್ತೇನೆ'' ಎಂದು ಹೇಳಿದರು. ಇದರಿಂದ ಸ್ವಾಮೀಜಿಯವರ ದಯಾಗುಣ ನಮಗೆ ತಿಳಿದುಬರುತ್ತದೆ.

*(ಮುಂದುವರಿಯುವುದು)*